

ಕಾಲದಲ್ಲಿ 25 ಡಿಗ್ರಿಗೆ ಏರುತ್ತದೆ., ಜೂನ್, ಜುಲೈಯಲ್ಲಿ ಇಲ್ಲಿ ಮಳೆಗಾಲ.

## ಕೈಬೀಸಿ ಕರೆವ ನಗರಗಳು

ನಾರಾ: 8ನೇ ಶತಮಾನದಲ್ಲಿ ಜಪಾನಿನ ರಾಜಧಾನಿಯಾಗಿತ್ತು ನಾರಾ. ಸಂಪೂರ್ಣ ಮರದಿಂದಲೇ ಕಟ್ಟಿದ, ಯುನೆಸ್ಕೋ ವರ್ಲ್ಡ್ ಹೆರಿಟೇಜ್ ಸೈಟ್ ಎಂದು ಗುರುತಿಸಿದ ಟೊಡೈಜಿ ಮಂದಿರ, ಮಂದಿರದಲ್ಲಿರುವ ಅತೀ ಎತ್ತರದ ಡೈಬುಟ್ಸು (ಬುದ್ಧ) ಮೂರ್ತಿ, ಮಂದಿರದ ಹೊರಗಿರುವ ಜಿಂಕೆಗಳ ಪಾರ್ಕ್ ಎಲ್ಲವೂ ಆಕರ್ಷಣೀಯ. ಕೊಳ, ಹಲವು ತರಹದ ಮರಗಳು ಮತ್ತು ಹೂವಿನ ಗಿಡಗಳಿರುವ ಇಸುಯಿ–ಎನ್ ಗಾರ್ಡನ್, ಕಸುಗ–ತೀಶಾ ಪುಣ್ಯಕ್ಷೇತ್ರ ಇಲ್ಲಿ ಸಂದರ್ಶಿಸಬಹುದಾದ ಸ್ಥಳಗಳು. ಕಸುಗ–ತೀಶಾ ಶಿಂತೋ ಧರ್ಮದವರ ಪುಣ್ಯಕ್ಷೇತ್ರ, ಇಲ್ಲಿ ಗೋಪುರವಲ್ಲದೇ ಕಾಡು, ಗುಡ್ಡ, ಮಾರ್ಗಗಳು, ಚೆರ್ರಿ ಗಿಡಗಳು, ಗೂಡು ದೀಪಗಳು, ಚಿಕ್ಕ ಪುಟ್ಟ ಗೋಪುರಗಳು, ಕಿಮೋನ ತೊಟ್ಟ ಜಪಾನಿಗರ ಗುಂಪು ಎಲ್ಲವೂ ಗಮನ ಸೆಳೆಯುತ್ತದೆ.

ಕ್ಯೋಟೋ: ಕ್ಯೋಟೋದಲ್ಲಿ ಸುಮಾರು 2,000 ಮಂದಿರಗಳು ಮತ್ತು ಪುಣ್ಯಕ್ಷೇತ್ರಗಳಿವೆ. ಇದು ದೇವನಗರಿಯೇ. ಶಿಂತೋ ಧರ್ಮದವರ ಫುಶುಮಿ ಇನಾರಿ ಪುಣ್ಯ ಕ್ಷೇತ್ರ.

ಒಸಾಕ: ಒಸಾಕ ಜಪಾನಿನ ಪ್ರಮುಖ ಕೈಗಾರಿಕಾ ನಗರ. ಎಲ್ಲಿ ನೋಡಿದರೂ ಬಂದರುಗಳೇ. ಟೋಕಿಯೋದ ನಂತರ ಅತೀ ಹೆಚ್ಚು ಜನಸಂಖ್ಯೆ ಇರುವ ನಗರ. ನೋಡಬಹುದಾದ ಸ್ಥಳಗಳು ಒಸಾಕ ದುರ್ಗ ಮತ್ತು ಅರಮನೆ, ಯುನಿವರ್ಸಲ್ ಸ್ಟುಡಿಯೊ, ಒಸಾಕ ಫ್ಲೈಯರ್ ಮುಂತಾದವು.

ಹಿರೋಶಿಮ: ಹಿರೋಶಿಮದ ಹೆಸರು ಕೇಳದೆ ಇಲ್ಲದವರು ಇಲ್ಲವೇನೋ! ಎರಡನೇ ಮಹಾಯುದ್ಧದಲ್ಲಿ ಲಿಟ್ಲ್ ಬಾಯ್ ಬಾಂಬು ಬಿದ್ದು ಲಕ್ಷಾಂತರ ಜನರು ಪ್ರಾಣ ಕಳೆದುಕೊಂಡು ಅಕ್ಷರಶಃ ನಿರ್ನಾಮವಾಗಿದ್ದ ಜಾಗದಲ್ಲಿ ಹಿರೋಶಿಮ ಶಾಂತಿ ಸ್ಮಾರಕ ಉದ್ಯಾನವನ ಮತ್ತು ಮ್ಯೂಸಿಯಂ ತಲೆಯೆತ್ತಿದೆ. ಹಿರೋಶಿಮ ಈಗ ಅತ್ಯಂತ ಮುಂದುವರಿದ ನಗರವಾಗಿದೆ. ಅಣುಬಾಂಬನ್ನು ತಮ್ಮ ಅಹಂಕಾರಕ್ಕೊಂದು ಪಾಠವಾಗಿ ತೆಗೆದುಕೊಂಡಿದ್ದಾರೆ ಜಪಾನಿಗರು. ಆದ್ದರಿಂದಲೋ ಏನೊ ಜಪಾನಿಗೆ ಭೇಟಿ ಇತ್ತರೆ ನಮ್ಮ ಕಣ್ಮನ ಸೆಳೆಯುವುದು ಅವರ ನಮ್ರತೆ. ಅಲ್ಲಿನ ಗೈಡುಗಳೂ ಇದನ್ನೇ ಉಚ್ಚರಿಸುತ್ತಾರೆ. ಹಿರೋಶಿಮಾದಿಂದ ಟೋಕಿಯೋಗೆ ಅತ್ಯಧಿಕ ವೇಗದ ಬುಲೆಟ್ ಟ್ರೈನ್ ಇದೆ.

ಟೋಕಿಯೊ: ಜಪಾನಿನ ರಾಜಧಾನಿ ಇದು. ಅತ್ಯಂತ ಮುಂದುವರಿದ ನಗರ. ವಿಶ್ವದ ಅತೀ ದುಬಾರಿ ನಗರಗಳಲ್ಲೊಂದು. ಟೋಕಿಯೋದಲ್ಲಿ ಸಂದರ್ಶಿಸಲು ಸಾಕಷ್ಟು ಸ್ಥಳಗಳಿವೆ. ನಗರದಲ್ಲಿ ಅತ್ಯಂತ ಹಳೆಯ ಮತ್ತು ಅತಿ ಹೆಚ್ಚು ಜನರು ಸಂದರ್ಶಿಸುತ್ತಿರುವ ಮಂದಿರ ಅಸಕುಸಾ ಸೆನ್ಸೋಜಿ ಮಂದಿರ. ರಾಜ ಮತ್ತು ರಾಜ ಪರಿವಾರದವರ ಇಂಪೀರಿಯಲ್ ಅರಮನೆ ಇನ್ನೊಂದು ಆಕರ್ಷಣೆ. ಈ ಅರಮನೆಯ ಒಳಗೆ ಪ್ರವೇಶಿಸಬೇಕೆಂದರೆ ಹಲವು ವಾರಗಳ ಮೊದಲೇ ಮನವಿ ಮಾಡಿಕೊಂಡು, ಸಮ್ಮತಿಯನ್ನು ಪಡೆದಿರಬೇಕು. ಇಲ್ಲದಿದ್ದರೆ ಅರಮನೆಯ ಎದುರುಗಡೆ ಇರುವ ಉದ್ಯಾನವನಕ್ಕೆ ಮಾತ್ರ ಪ್ರವೇಶ. ಓಡಾಡಲು ಖಾಲಿ ಜಾಗ ಹಾಗೂ ನೆರಳನ್ನು ಕೊಡುವ ಸಾಕಷ್ಟು ಮರ ಗಿಡಗಳಿರುವ ಉದ್ಯಾನವನ ಸುಮ್ಮನೆ ಅಡ್ಡಾಡಿಕೊಂಡು ವಿಶ್ರಾಂತಿ ಪಡೆಯಲು ಯೋಗ್ಯವಾಗಿದೆ. ಉದ್ಯಾನವನದಿಂದ ಇಂಪೀರಿಯಲ್ ಅರಮನೆ ಮತ್ತು ಅದರ ಎದುರಿರುವ ಕಾಲುವೆಯ ನೋಟ ಬಲು ಸುಂದರ.



ಜಪಾನೀಯರ ಸಾಂಪ್ರದಾಯಿಕ ಉಡುಗೆ

ಹಿರೋಶಿಮ ಶಾಂತಿ ಸ್ಮಾರಕ ಉದ್ಯಾನವನ

